International Journal of Kannada Research 2018; 4(4): 129-132

International Journal of Kannada Research
www.kannadajournal.com

ISSN: 2454–5813
IJKR 2018; 4(4): 129-132
© 2018 IJKR
www.kannadajournal.com
Received: 24-08-2018
Accepted: 25-09-2018

**ಎಸ್. ಸಿದ್ದೇಗೌಡ**
ಕನ್ನಡ ಸಹಾಯಕ ಪ್ರಾಧ್ಯಾಪಕರು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು

**Correspondence**
**ಎಸ್. ಸಿದ್ದೇಗೌಡ**
ಕನ್ನಡ ಸಹಾಯಕ ಪ್ರಾಧ್ಯಾಪಕರು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು

# ಜನಪದ ಗಾದೆಗಳಲ್ಲಿ ಸಾಮಾಜಿಕ ಮೌಲ್ಯ

**ಎಸ್. ಸಿದ್ದೇಗೌಡ**

ಗ್ರಂಥಸ್ಥ ಕನ್ನಡ ಸಾಹಿತ್ಯಕ್ಕೆ ಸು. 1500 ವರ್ಷಗಳ ಸುಧೀರ್ಘ ಇತಿಹಾಸವಿದೆ. ಅದರ ಹಿಂದಿನಿಂದಲೂ ಕನ್ನಡ ಭಾಷೆ ಬೆಳೆಯತೊಡಗಿ ಜನತೆಯಲ್ಲಿ ರೂಢಮೂಲವಾಗಿದ್ದಿರಬೇಕು. ಕ್ರಿ.ಶ.ದ ಆರಂಭದ ಹೊತ್ತಿಗಾಗಲೇ ಕನ್ನಡ ಭಾಷೆ ಸ್ಪಷ್ಟವಾಗಿ ರೂಪುಗೊಂಡು ಪುಷ್ಟಿಗೊಳ್ಳಲಾರಂಭಿಸಿತೆಂದು ಹಲವಾರು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಕನ್ನಡದಲ್ಲಿ ಇದುವರೆಗೆ ಸಿಕ್ಕಿರುವ ಗ್ರಂಥಗಳಲ್ಲಿ ಕ್ರಿ.ಶ ಸು 850ರಲ್ಲಿ ರಚನೆಯಾದ 'ಕವಿರಾಜಮಾರ್ಗ'ವೇ ಪ್ರಾಚೀನವಾದುದು. ಇದಕ್ಕಿಂತಲೂ ಮೊದಲು ಕನ್ನಡದಲ್ಲಿ ಸಾಹಿತ್ಯ ಕೃಷಿ ನಡೆದಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಕ್ರಿ.ಶ. ಸು 450ರ ಹಲ್ಮಿಡಿ ಶಾಸನ ಕನ್ನಡದಲ್ಲಿ ಸಾಹಿತ್ಯ ಕೃಷಿ ಆರಂಭವಾಗಿದ್ದುದರ ಕುರುಹಾಗಿದೆ. ಜೊತೆಗೆ ಜನಪದ ಸಾಹಿತ್ಯ ಸಮೃದ್ಧ ಪ್ರಮಾಣದಲ್ಲಿ ರಾಶಿಯಾಗಿದ್ದುದನ್ನು ಕಾಣಬಹುದು. ಕವಿರಾಜಮಾರ್ಗಕಾರ ತನ್ನ ಗ್ರಂಥದಲ್ಲಿ ಕನ್ನಡ ನಾಡಿನ ಸಾಮಾನ್ಯ ಜನರನ್ನು ಕುರಿತು "ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್" ಎಂದು ಸಾರಿದ್ದಾನೆ. ಇದು ಮುಖ್ಯವಾಗಿ ಜನಪದ ಸಾಹಿತ್ಯವನ್ನು ಕುರಿತು ಆಡಿದ ಮಾತಾಗಿದೆ. ಅಂದರೆ ಆ ಕಾಲಕ್ಕಾಗಲೇ ಜನಪದ ಸಾಹಿತ್ಯ ಒಂದು ಉನ್ನತ ಸ್ಥಾನವನ್ನು ಪಡೆದಿತ್ತು.

ಕಾಲಾನಂತರದಲ್ಲಿ ಜನಪದ ಸಾಹಿತ್ಯ ಅವಜ್ಞೆಗೆ, ತಿರಸ್ಕಾರಕ್ಕೆ ಗುರಿಯಾಯಿತು. ಜನಪದ ಸಾಹಿತ್ಯ ಅಶಿಷ್ಟರ, ಗ್ರಾಮ್ಯರ, ಓದು ಬರಹ ಬಾರದವರ ನುಡಿಯಾದುದರಿಂದ ಅದರ ಬಗ್ಗೆ ಮಾತಾಡುವುದೇ ಅವಮಾನ ಎಂಬ ಭಾವನೆ ಶಿಷ್ಟರಲ್ಲಿ ಬೇರೂರಿತು. ನಿಜವಾದ ಸಾಹಿತ್ಯವೆಂದರೆ ಬರಹದ ಸಾಹಿತ್ಯವೇ ಹೊರತು ಬೇರೆಯಲ್ಲ. ಆದುದರಿಂದ ಈ ರೀತಿಯ ಜನಪದ ಸಾಹಿತ್ಯಕ್ಕೆ ಯಾವುದೇ ಬೆಲೆಯಿಲ್ಲ ಎಂದು ತಿರಸ್ಕರಿಸಿದರು. ಅಷ್ಟೆ ಅಲ್ಲ ಜನಪದ ಸಾಹಿತ್ಯವನ್ನು ಅವಹೇಳನ ಮಾಡುವ, ಕಟಕಿಯಾಡುವ, ವ್ಯಂಗ್ಯವಾಡುವ ಪ್ರವೃತ್ತಿ ಕೆಲವು ಶಿಷ್ಟ ಸಾಹಿತಿಗಳಲ್ಲಿ ಮನೆ ಮಾಡಿತು. ಸು 1400ರಲ್ಲಿದ್ದ ಮಧುರ ಕವಿಯು ತನ್ನ 'ಧರ್ಮನಾಥ ಪುರಾಣ'ದಲ್ಲಿ ಜನಪದ ಸಾಹಿತ್ಯವನ್ನು ಕುರಿತು ಈ ರೀತಿ ಕಟಕಿಯಾಡಿದ್ದಾನೆ.

> ಪಂಡಿತರುಂ ವಿವಿಧ ಕಳಾ
> ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್!
> ಕಂಡರ್ ಕೇಳ್ವೊಡೆ ಗೊರವರ
> ದುಂಡುಚಿಯೆ ಬೀದಿವಣಿಯ ಬೀರನ ಕತೆಯೇ!!

ಆದರೆ ಇಂದು ಆ ಪರಿಸ್ಥಿತಿ ಇಲ್ಲ. ಜನಪದ ಸಾಹಿತ್ಯಕ್ಕೆ ಶಿಷ್ಟ ಸಾಹಿತ್ಯದಷ್ಟೆ ನೆಲೆ, ಬೆಲೆಯನ್ನು ನೀಡಲಾಗುತ್ತಿದೆ. ಜನಪದ ಎಲ್ಲ ಸಾಹಿತ್ಯದ ಮೂಲ, ತಾಯಿ ಎಂಬುದು ಅರಿವಾಗಿದೆ. ಆದುದರಿಂದ ಇಂದು ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಸಂಪಾದಿಸುವ ಕಾರ್ಯ ಅಪಾರ ಪ್ರಮಾಣದಲ್ಲಿ ನಡೆಯುತ್ತಿದೆ. ಜಾನಪದ ಸಾಹಿತ್ಯದ ಬಗೆ, ಭಾಷಿಕ ಬಗೆ, ವೈಜ್ಞಾನಿಕ ಬಗೆ, ಕ್ರಿಯಾತ್ಮಕ ಬಗೆಗಳಿಗೆ ಸಂಬಂಧಿಸಿದಂತೆ ಕಥೆ, ಗೀತೆ, ಲಾವಣಿ, ಒಗಟು, ಗಾದೆ, ನಂಬಿಕೆ, ಸಂಪ್ರದಾಯ, ವೈದ್ಯ, ಇತ್ಯಾದಿಯಾಗಿ ಜನಪದ ಜೀವನದ ಎಲ್ಲ ಸ್ತರಗಳನ್ನು ಒಳಗೊಳ್ಳುವ ವಿಸ್ತಾರ, ವೈವಿಧ್ಯದ ಹಿನ್ನಲೆಯಲ್ಲಿ ಪರಿಶೋಧನೆಗಳು ನಡೆಯುತ್ತಿವೆ. ಇಂತಹ ಜನಪದ ಪ್ರಕಾರಗಳಲ್ಲಿ 'ಗಾದೆ'ಯೂ ಒಂದು.

ಸಾಮಾನ್ಯವಾಗಿ ಗಾದೆ ಇಲ್ಲದ ಭಾಷೆಯಿಲ್ಲ; ಗಾದೆ ಬಾರದ ಮನುಷ್ಯನಿಲ್ಲ ಎಂದು ಹೇಳಬಹುದು. ಗಾಳಿ ಬೆಳಕಿನಂತೆ ಜನಜೀವನದ ಉದ್ದ ಅಗಲಗಳನ್ನು ಆವರಿಸಿಕೊಂಡಿವೆ. ಗಾದೆ ಜನಪದ ಸಾಹಿತ್ಯದ ಜನಪ್ರಿಯ ಪ್ರಕಾರಗಳಲ್ಲಿ ಒಂದು. ಆಡು ಮುಟ್ಟದ ಸೊಪ್ಪಿಲ್ಲ ಎನ್ನುವ ಹಾಗೆ ಗಾದೆ ಮುಟ್ಟದ ವಸ್ತುವಿಲ್ಲ; ತಟ್ಟೆಬ್ಬಿಸದ ಭಾವವಿಲ್ಲ ಎನ್ನಬಹುದು. ಡಾ. ಸುಧಾಕರ ಅವರು ಹೇಳುವಂತೆ, "ಒಂದು ರೀತಿಯಲ್ಲಿ ಅದು ಜನ ಸಾಮಾನ್ಯರ ವಿಶ್ವಕೋಶ; ತಾವೇ ನಿರ್ಮಿಸಿಕೊಂಡು ಪಾಲಿಸಿಕೊಂಡು ಬಂದ ಸಂವಿಧಾನ; ತಾವೇ ರಚಿಸಿದ ವೇದ"[1].

[1] ಸುಧಾಕರ – ನಮ್ಮ ಸುತ್ತಿನ ಗಾದೆಗಳು, ಪ್ರಸ್ತಾವನೆ – ಪು.ಸಂ. 11

ಗಾದೆಗಳು ಜನ ಸಾಮಾನ್ಯರು ತಾವು ಸ್ವತಃ ಅನುಭವಿಸಿದ ಅನುಭವದ ಆಧಾರದ ಮೇಲೆ ರಚಿಸಿರುವಂತವು. ಆಕಾರದಲ್ಲಿ ವಾಮನನ ಹಾಗೆ ಕಿರಿದಾಗಿದ್ದರೂ ಅರ್ಥ ಸ್ವರೂಪದಲ್ಲಿ ತ್ರಿವಿಕ್ರಮನಂತೆ ಜೀವನದ ಎಲ್ಲ ಅಂಶಗಳನ್ನು ಒಳಗೊಂಡಿವೆ.

ಗಾದೆಗಳು ಶತ-ಶತಮಾನಗಳಿಂದಲೂ ಬಳಕೆಯಲ್ಲಿದ್ದು, ಮಾಖಿಕವಾದ ಇವು ಬಾಯಿಂದ ಬಾಯಿಗೆ ಸಾಗಿ ಬಂದಿವೆ. ಜನರು ಮಾತನಾಡುವಾಗ ಆಡಿದ ಮಾತಿಗೆ ಬಲ ತುಂಬಲೋ ಅಥವಾ ಅದರ ಪ್ರಭಾವವನ್ನು ಸ್ಪಷ್ಟಪಡಿಸಲೋ ಮಾತಿನ ಮಧ್ಯೆ ಬಳಸುತ್ತಾರೆ. ಮಾತಿನ ನಡುವೆ ಯಾವುದೇ ಗಾದೆ ನೆನಪಿಗೆ ಬಾರದೆ ಹೋದರೆ 'ಅದೇನೋ ಗಾದೆ ಹೇಳ್ದಂಗಾಯ್ತು' ಎಂದು ತೇಲಿಸಿ ಹೇಳುತ್ತಾರೆ. ಇದರಿಂದ ಗಾದೆಗಳು ಜನ ಸಾಮಾನ್ಯರ ಜೀವನದ ಒಂದು ಅಂಗವಾಗಿ ಪರಿಣಮಿಸಿವೆ.

ಮನುಷ್ಯ ಪ್ರಕೃತಿಯ ಶಿಶು; ಸಮಾಜದ ಒಂದು ಭಾಗ. ಹಾಗಾಗಿ ಆತನ ಪ್ರತಿಯೊಂದು ವಿಚಾರದಲ್ಲಿಯೂ ಸಾಮಾಜಿಕ ಅಂಶಗಳನ್ನು ಗುರುತಿಸಲು ಸಾಧ್ಯವಿದೆ. 10ನೇ ಶತಮಾನದ ಪಂಪ ತನ್ನ 'ವಿಕ್ರಮಾರ್ಜುನ ವಿಜಯ' ಕೃತಿಯಲ್ಲಿ 'ನಾಲಗೆ ಕುಲಮಂ ಪೇಳ್ವುದು' ಎಂದಿದ್ದಾನೆ. ಅಂದರೆ ಮಾತು, ನಡವಳಿಕೆ ಆತನ ವ್ಯಕ್ತಿತ್ವವನ್ನು, ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿರುತ್ತದೆ. ಆ ಹಿನ್ನಲೆಯಲ್ಲಿ ಮನುಷ್ಯನ ಜೀವನದ ಒಂದು ಭಾಗವಾದ ಗಾದೆಗಳಲ್ಲೂ (ಗಾದೆಗಳೂ ಕೂಡ ಮಾತಿನ ಒಂದು ರೂಪ) ಆತನ ಸಮಾಜದ ಸತ್ಯ, ನಿಷ್ಠೆ, ನೈತಿಕತೆ, ಧರ್ಮ, ಆಚಾರ, ವಿಚಾರ, ಸಂಪ್ರದಾಯ, ಆಚರಣೆಗಳು, ರಾಜಕೀಯ .....! ಇವೇ ಮೊದಲಾದ ಮೌಲ್ಯಗಳನ್ನು ಗುರುತಿಸಬಹುದಾಗಿದೆ. ಆ ಮೂಲಕ ಗಾದೆಗಳ ಮಹತ್ವವನ್ನು ಅರಿಯಲು ಸಾಧ್ಯವಾಗುತ್ತದೆ. ಈಗ ಆ ರೀತಿಯ ಕೆಲವು ಗಾದೆಗಳನ್ನು, ಅವು ಒಳಗೊಂಡಿರುವ ಸಾಮಾಜಿಕ ಮೌಲ್ಯಗಳನ್ನು ಗುರುತಿಸಬಹುದು.

**ಕೈ ಕೆಸರಾದರೆ ಬಾಯಿ ಮೊಸರು**

ಪ್ರತಿಯೊಬ್ಬರೂ ಕೇಳಿರುವ, ಶ್ರಮದ ಮಹತ್ವವನ್ನು ಕುರಿತು ಹೇಳುವ ಗಾದೆ ಇದಾಗಿದೆ. ಕೈ ಕೆಸರಾದರೆ ಎಂದರೆ ಕಷ್ಟಪಟ್ಟು ದುಡಿದರೆ, ಆ ಮೂಲಕ ಕೈಗಳು ಶ್ರಮ ಪಟ್ಟರೆ, ಬಾಯಿಗೆ ಮೊಸರು ಸಿಗುತ್ತದೆ. ಅಂದರೆ ಸುಖ ಸಂಪತ್ತು ಸಿಗುತ್ತದೆ ಎಂಬುದಾಗಿದೆ. ಕಷ್ಟಪಟ್ಟು ದುಡಿಯದೆ ಇದ್ದರೆ ದುಡಿತದ ಫಲವಾದ ಹಣ ದೊರೆಯದೆ ಜೀವನವನ್ನು ನಡೆಸುವುದು ದುಸ್ತರವಾಗಿ, ತಿನ್ನಲು ಗತಿಯಿಲ್ಲದೆ ಬದುಕ ನರಕಪ್ರಾಯವಾಗುತ್ತದೆ. ಇದಕ್ಕೆ ಪೂರಕವಾಗಿ "ಕೂತು ಉಣ್ಣೋನಿಗೆ ಕುಡಿಕೆ ಹೊನ್ನು ಸಾಲದು" ಎಂಬ ಗಾದೆಯೂ ಇದೆ. ಆ ಮೂಲಕ ದುಡಿದು ತಿನ್ನಬೇಕು ಎನ್ನುವ ಮೌಲ್ಯವನ್ನು ತಿಳಿಸುತ್ತದೆ. 12ನೇ ಶತಮಾನದ ಶ್ರೇಷ್ಟ ವಚನಕಾರರಾದ ಬಸವಣ್ಣನವರು ಇದನ್ನೇ 'ಕಾಯಕವೇ ಕೈಲಾಸ' ಎಂದು ಕರೆದಿರುವುದು.

**ಹಾಸಿಗೆ ಇದ್ದಷ್ಟು ಕಾಲು ಚಾಚು**

ಇರುವುದರಲ್ಲಿ ತೃಪ್ತಿ ಪಡಬೇಕು ಎನ್ನವ ಸಾರ್ವತ್ರಿಕ ಮೌಲ್ಯವನ್ನು ಈ ಗಾದೆಯು ಒಳಗೊಂಡಿದೆ. ಹಾಸಿಗೆ ಇದ್ದಷ್ಟು ಕಾಲು ಚಾಚಿ ಮಲಗಿದರೆ ಸ್ವಲ್ಪ ಪ್ರಮಾಣದಲ್ಲಿ ಕಷ್ಟವಾದರೂ ಯಾವುದೇ ನೋವಿಲ್ಲದೆ ಸುಖವಾದ ನಿದ್ರೆ ಮಾಡಬಹುದು. ಹಾಗಲ್ಲದೆ ಹಾಸಿಗೆಯನ್ನು ದಾಟಿ ಕಾಲು ಚಾಚಿ ಮಲಗಲು ಯತ್ನಿಸಿದರೆ ಆರಂಭದಲ್ಲಿ ಹಿತವಾಗಿ ಕಂಡರೂ ಕ್ರಮೇಣ ಕಾಲು ನೋವು ಅಧಿಕವಾಗಿ ನೂವಿನಿಂದ ನಿದ್ರಿಸಲಾರದ ಸ್ಥಿತಿಯನ್ನು ತಲುಪುತ್ತೇವೆ. ಇದರರ್ಥ ಇರುವುದರಲ್ಲಿ ತೃಪ್ತಿಯನ್ನು ಪಟ್ಟುಕೊಂಡರೆ ಆರಂಭದಲ್ಲಿ ಸ್ವಲ್ಪ ಪ್ರಮಾಣದ ಅಸುಖ ಪ್ರಾಪ್ತಿಯಾದರೂ ಕ್ರಮೇಣ ಅದಕ್ಕೆ ಹೊಂದಿಕೆಯಾಗಿ ಯಾವುದೇ ಗೋಜಲಿಲ್ಲದೆ, ಇನ್ನೊಬ್ಬರ ಹೀಯಾಳಿಕೆ, ತೆಗಳಿಕೆಗಳಿಲ್ಲದೆ ನೆಮ್ಮದಿಯ ಜೀವನ ನಡೆಸಬಹುದು. ಅದನ್ನು ಬಿಟ್ಟು ನಮ್ಮ ಅರ್ಹತೆ, ಅಂತಸ್ತನ್ನು ಮೀರಿ 'ಸಾಲ ಮಾಡಿಯಾದ್ರೂ ತುಪ್ಪ ತಿನ್ನು' ಎನ್ನುವ ಗಾದೆಯಂತೆ ಮಿತಿ ಮೀರಿದ ದುಂದುವೆಚ್ಚವನ್ನು ಮಾಡಿದರೆ, ಆರಂಭದಲ್ಲಿ ಹಿತವಾಗಿ ಕಂಡರೂ 'ಅತಿಯಾಸೆ ಗತಿಕೇಡು' ಎನ್ನುವ ಹಾಗೆ ಕಾಲ ಕ್ರಮೇಣ ಆ ಜೀವನವನ್ನು ನಿಭಾಯಿಸಲಾಗದೆ, ಇತರರಿಂದ ಛೀ, ಥೂ ಎಂದು ಉಗಿಸಿಕೊಂಡು ಬದುಕಬೇಕಾಗುತ್ತದೆ ಎಂಬುದನ್ನು ತಿಳಿಸುತ್ತದೆ.

**ಅತಿಯಾಸೆ ಗತಿಕೇಡು**

ದುರಾಸೆ ಮನುಷ್ಯನಾದವನಿಗೆ ಒಳ್ಳೆಯದಲ್ಲ; ಅಪಾಯಕಾರಿ ಎಂಬ ಮಾನವೀಯ ಮೌಲ್ಯವನ್ನು ಸಮಾಜಕ್ಕೆ ತಿಳಿಯಪಡಿಸುವುದು ಈ ಗಾದೆಯ ಉದ್ದೇಶ.. ಮನುಷ್ಯನಿಗೆ ಆಸೆ ಇರಬೇಕು ನಿಜ. ಬದುಕುವ, ಬದುಕಿನಲ್ಲಿ ಏನನ್ನಾದರೂ ಗಳಿಸುವ, ಪಡೆಯುವ, ಉಳಿಸುವ ಆಸೆ ಇರಬೇಕು. ಇಲ್ಲದೇ ಹೋದಲ್ಲಿ ಬದುಕು ನಿಸ್ಸಾರವಾಗಿ ಜುಗುಪ್ಸೆಗೆ ಕಾರಣವಾಗಿಬಿಡುತ್ತದೆ. ಆದರೆ ಆಸೆ ಎಂಬುದು ಒಂದು ಮಿತಿಯ ಒಳಗೆ ಇರಬೇಕು. ಆಸೆಯಷ್ಟೇ ಅಲ್ಲ; ಯಾವುದಾದರೂ ಕೂಡ ಮಿತಿಯ ನೆಲೆಯ ಒಳಗೆ ಇರಬೇಕು. ಇಲ್ಲದಿದ್ದಲ್ಲಿ 'ಅತಿಯಾದರೆ ಅಮೃತವೂ ವಿಷ' ಎನ್ನುವ ಹಾಗೆ ತಾತ್ಸಾರಕ್ಕೆ ಒಳಗಾಗುತ್ತದೆ. ಅಂತಹುದರಲ್ಲಿ ಆಸೆ ಮಿತಿಯಲ್ಲೇ ಇರಬೇಕು. ಆಸೆ ಅತಿಯಾದರೆ ಅದನ್ನು ನಾವು ದುರಾಸೆ ಎನ್ನುತ್ತೇವೆ. ಅತಿಯಾದ ಆಸೆ ಅಥವಾ ದುರಾಸೆಯನ್ನು ಈಡೇರಿಸಿಕೊಳ್ಳುವುದು ಸುಲಭದ ಮಾತಲ್ಲ. ಮನುಷ್ಯನಿಗೆ ಇರುವ ಅಲ್ಪ ಆಸೆಗಳನ್ನೇ ಈಡೇರಿಸಿಕೊಳ್ಳುವುದು ಕಷ್ಟಸಾಧ್ಯವಾಗಿರುವ ಇಂದಿನ ಸ್ಥಿತಿಯಲ್ಲಿ ಅತಿಯಾಸೆಯನ್ನು ಪಡುವುದು ಮತ್ತು ಅದನ್ನು ಈಡೇರಿಸಿಕೊಳ್ಳಲು ಹವಣಿಸುವುದು ಸಮಂಜಸವಾದುದಲ್ಲ. ಹಾಗೂ ಅತಿಯಾಸೆಯನ್ನು ಗಳಿಸಿಕೊಳ್ಳಲು ಅಥವಾ ಈಡೇರಿಸಿಕೊಳ್ಳಲು ಪ್ರಯತ್ನಿಸಿದರೆ ಅಂತಹ ಸಂದರ್ಭದಲ್ಲಿ ಸಾಧುವಲ್ಲದ ಅನ್ಯಾಯದ ಮಾರ್ಗವನ್ನು ಹಿಡಿಯಬೇಕಾಗುತ್ತದೆ. ಆಗ ಮನುಷ್ಯ ತನ್ನ ತನವನ್ನು ಬಿಟ್ಟು, ಇರುವ ಗೌರವವನ್ನು ತ್ಯಜಿಸಿ ಅನ್ಯಾಯದ ಮಾರ್ಗದಲ್ಲಿ ನಡೆಯಬೇಕಾಗುತ್ತದೆ. ಆ ಸಂದರ್ಭ ಭಗವಾನ್ ಬುದ್ಧ ಹೇಳಿದಂತೆ 'ಆಸೆಯೇ ದುಃಖಕ್ಕೆ ಮೂಲ'ವಾಗಿ ಬದುಕನ್ನು ಅಂತ್ಯಗೊಳಿಸಿಕೊಳ್ಳಬೇಕಾಗುತ್ತದೆ. ಇವೇ ಮೊದಲಾದ ವಿಚಾರಗಳನ್ನು ಈ ಗಾದೆಯು ತಿಳಿಸುತ್ತಿರುವುದನ್ನು ಕಾಣಬಹುದು.

**ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧ ರಾತ್ರೀಲಿ ಕೊಡೆ ಹಿಡಿಸಿದ**

ಮನುಷ್ಯ ಸ್ವಭಾವದ ಅಮಾನವೀಯ ಮೌಲ್ಯವನ್ನು ಪ್ರಸ್ತುತ ಗಾದೆ ವಿವರಿಸುತ್ತಿದೆ. ಮನುಷ್ಯನ ಸ್ವಭಾವ ಮತ್ತು ವರ್ತನೆ ಪರಿಸರದ ಬಾಹ್ಯ ಕಾರಣಗಳಿಗೆ ಒಳಗಾಗಿ ಆಗಾಗ ಬದಲಾಗುತ್ತಿರುತ್ತವೆ. ಅದರಲ್ಲೂ ಹಣ, ಸಂಪತ್ತು, ಐಶ್ವರ್ಯ, ಶ್ರೀಮಂತಿಕೆ ಇವು ಮನುಷ್ಯನ್ನು ಹೇಗೆ ಬೇಕೋ ಹಾಗೆ ಕುಣಿಸುತ್ತಿರುತ್ತವೆ. ಹಾಗಾಗಿಯೇ ನಮ್ಮ ಹಿರಿಯರು ಸಂಪತ್ತಿನ ಅಧಿದೇವತೆಯಾದ ಲಕ್ಷ್ಮಿಯನ್ನು 'ಚಂಚಲೆ' ಎಂದು ಕರೆದಿರುವುದು. ಆಧುನಿಕ ಕವಿ ಬೇಂದ್ರೆಯವರಂತೂ ಅದನ್ನು 'ಕುರುಡು ಕಾಂಚಾಣ' ಎಂದು ಹೇಳಿ, 'ಕುರುಡು ಕಾಂಚಾಣ ಕುಣಿಯುತಲಿತ್ತು, ಕಾಲಿಗೆ ಬಿದ್ದವರ ತುಳಿಯುತಲಿತ್ತೋ' ಎಂದು ಹಾಡಿದ್ದಾರೆ. ಅಂತಹ ಸಂಪತ್ತು, ಐಶ್ವರ್ಯ ಮನುಷ್ಯನನ್ನು ಮದ್ಯದ ಅಮಲಿನಲ್ಲಿದ್ದವರು ತೇಲುವ ಹಾಗೆ ತೇಲಿಸುತ್ತದೆ. ಮನುಷ್ಯನಾದವನಿಗೆ ಹಣದ ಮದ ಇಲ್ಲದಿದ್ದರೆ ಇತರರೊಂದಿಗೆ ತಗ್ಗಿ, ಬಗ್ಗಿ ಬಹಳ ಪ್ರೀತಿಯಿಂದ, ಕರುಣೆಯಿಂದ, ಸಮಾನತೆಯ ಭಾವದಿಂದ ಇರುತ್ತಾನೆ. ಆದರೆ ಅದೇ ಮನುಷ್ಯನಿಗೆ ಸಂಪತ್ತು ದೊರೆತು ಹಣದ ಮದ ನೆತ್ತಿಗೇರಿದರೆ 'ತಾನೇ ಶ್ರೇಷ್ಟ ಉಳಿದವರೆಲ್ಲರೂ ನಿಕೃಷ್ಟ' ಎಂದು, ಸಮಾಜದ ಇತರರಿಗಿಂತ ತಾನೇ ಭಿನ್ನ ಎಂಬ ಭಾವನೆಯಿಂದ ವರ್ತಿಸಲು ಆರಂಭಿಸುತ್ತಾನೆ.

**ಮನೆಗೆ ಮಾರಿ ಊರಿಗೆ ಉಪಕಾರಿ**

'ಪರೋಪಕಾರ' ಎಂಬ ಮಾನವೀಯ ಸಾಮಾಜಿಕ ಮೌಲ್ಯವನ್ನು ಪ್ರಸ್ತುತ ಗಾದೆ ಸಾದರ ಪಡಿಸುತ್ತಿದೆ. ಪರರನ್ನು ಬಹಳ ಪ್ರೀತಿಯಿಂದ ಕಂಡು, ಅವರ ಸೇವೆಯನ್ನು ಮಾಡಿ, ಅವರ ಕಷ್ಟ-ಸುಖಗಳಲ್ಲಿ ಭಾಗಿಯಾಗುವುದು 'ದೇವರಿಗೆ ಮಾಡಿದ ಸೇವೆ'ಯಷ್ಟೇ ಮೌಲ್ಯಯುತವಾದುದು ಎಂಬುದು ನಂಬಿಕೆ. ಹಾಗಾಗಿ ಭಾರತ ಮತ್ತು ಭಾರತೀಯರಲ್ಲಿ ಇತರರಿಗೆ ಹೋಲಿಸಿದರೆ ಪರೋಪಕಾರದ ಗುಣ ಅಧಿಕವಾಗಿಯೇ ಇರುವುದನ್ನು ಕಾಣಬಹುದು. ಆದರೆ

ಸಮಾಜ ಸೇವೆಯಂತಹ ಪರೋಪಕಾರದಲ್ಲಿ ತೊಡಗಿ ರಾಷ್ಟ್ರ, ರಾಜ್ಯ, ಊರಿನ ಅಭಿವೃದ್ಧಿಗಾಗಿ ಶ್ರಮಿಸುವವರು ಸದಾ ಕಾಲ ಆ ದಿಸೆಯಲ್ಲೇ ಆಲೋಚಿಸುತ್ತ, ಅದರಲ್ಲೇ ಮಗ್ನರಾಗಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ತನ್ನ ವೈಯುಕ್ತಿಕ ಜೀವನ, ಕುಟುಂಬ, ಸಂಸಾರ, ಆಸೆ, ಆಮಿಷಗಳ ಕಡೆಗೆ ಗಮನವನ್ನು ನೀಡುವುದು ಸಾಧ್ಯವಾಗುವುದಿಲ್ಲ. ಇದಕ್ಕೆ ಉದಾಹರಣೆ ಎಂಬಂತೆ ಭಗವಾನ್ ಬುದ್ಧ, ಮಹಾವೀರ, ಬಸವಣ್ಣ, ಮಹಾತ್ಮ ಫುಲೆ, ಗಾಂಧಿ ಇವರೇ ಮೊದಲಾದ ಮಹನೀಯರನ್ನು ಕಾಣಬಹುದು. ಇಂತಹ ಸಮಾಜ ಸುಧಾರಕರು ಸಮಾಜ ಸೇವೆಯಲ್ಲಿಯೇ ಮಗ್ನರಾಗಿರುವುದರಿಂದ ಮನೆಯವರ ದೃಷ್ಠಿಯಲ್ಲಿ ಅವಕೃಪೆಗೆ ಒಳಗಾಗುತ್ತಾರೆ. ಆದರೆ ಅದೇ ಸಮಯದಲ್ಲಿ ಸಮಾಜ ಅವರನ್ನು ಹಾಡಿ ಹೊಗಳುತ್ತಿರುತ್ತದೆ. ಅದಕ್ಕೇ ಹೇಳುವುದು 'ಒಂದನ್ನು ಪಡೆಯಬೇಕಾದರೆ ಒಂದನ್ನು ಕಳೆದುಕೊಳ್ಳಬೇಕಾಗುತ್ತದೆ' ಎಂದು.

**ತಂದೆಗೆ ತಲೆ ಮಗ, ತಾಯಿಗೆ ಕಿರಿ ಮಗ**

ಸಮಾಜದಲ್ಲಿನ ಆಚಾರ ವಿಚಾರದ ಮೌಲ್ಯಗಳನ್ನು ಪ್ರಸ್ತುತದ ಗಾದೆಯು ಪ್ರಸ್ತುತ ಪಡಿಸುತ್ತಿದೆ. ತಲೆ ಮಗ ಎಂದರೆ ಹಿರಿಯ ಮಗ ಎಂದು ಅರ್ಥ. ಗಾದೆಯು ತಂದೆ ತಾಯಿಯರು ಮರಣ ಹೊಂದಿದ ಸಂದರ್ಭದಲ್ಲಿ ಸಂಪ್ರದಾಯದ ಪ್ರಕಾರ ಸಂಸ್ಕಾರ ಮತ್ತು ಉತ್ತರ ಕ್ರಿಯಾದಿ ಕಾರ್ಯಗಳನ್ನು ಮಾಡಬೇಕಾದ ಜವಾಬ್ದಾರಿ ಯಾರದ್ದಾಗಿರುತ್ತದೆ ಎಂಬುದನ್ನು ತಿಳಿಸುತ್ತಿದೆ. ತಂದೆ ಮರಣ ಹೊಂದಿದ ಸಂದರ್ಭ ಸಂಪ್ರದಾಯದ ಪ್ರಕಾರ ಆತನ ಸಂಸ್ಕಾರ ಮತ್ತು ಉತ್ತರ ಕ್ರಿಯಾದಿ ಕಾರ್ಯಗಳನ್ನು ಮಾಡಬೇಕಾದದ್ದು ತಲೆ ಮಗ ಅಂದರೆ ಹಿರಿಯ ಮಗನ ಜವಾಬ್ದಾರಿ ಆಗಿರುತ್ತದೆ. ಹಾಗೆಯೇ ತಾಯಿಯು ಮರಣ ಹೊಂದಿದ ಸಂದರ್ಭ ಆಕೆಯ ಸಂಸ್ಕಾರ ಮತ್ತು ಉತ್ತರ ಕ್ರಿಯಾದಿ ಕಾರ್ಯಗಳಗಳನ್ನು ಮಾಡಬೇಕಾದದ್ದು ಕಿರಿಯ ಮಗನ ಜವಾಬ್ದಾರಿಯಾಗಿರುತ್ತದೆ. ಈ ಸಂಪ್ರದಾಯವನ್ನು ಬಹಳ ಅರ್ಥಪೂರ್ಣವಾಗಿ ಪ್ರಸ್ತುತ ಗಾದೆಯು ತಿಳಿಸುತ್ತದೆ. ಇದೇ ಕಾರಣವಾಗಿ ತಾಯಿಗೆ ''ಕಿವಿ ಕಿತ್ತರೂ ಕಿರಿಮಗನ ಮೇಲೆ ಪ್ರೀತಿ'' ಎಂಬ ಗಾದೆ ಉದಯವಾಗಿರಬಹುದು.

**ಅಕ್ಕ ಇರುವ ತನಕ ಭಾವತನ**

ಈ ಗಾದೆಯು ಪ್ರಮುಖವಾಗಿ ಅಕ್ಕ ಮತ್ತು ಅಕ್ಕನ ಗಂಡ ಭಾವನ ನಡುವಿನ ಸಂಬಂಧಾತ್ಮಕ ಮೌಲ್ಯವನ್ನು ಪ್ರತಿಬಿಂಬಿಸುತ್ತಿದೆ. ಅಕ್ಕ ಮತ್ತು ಆಕೆಯ ಗಂಡನಾದ ಭಾವನ ನಡುವೆ ಸಂಬಂಧಗಳ ಭಾವನಾತ್ಮಕ ನೆಲೆ ಭಿನ್ನವಾಗಿರುತ್ತದೆ. ಅಕ್ಕನಿಗೆ ಸಹಜವಾಗಿ ತನ್ನ ತಂಗಿ, ತಮ್ಮ, ಅಣ್ಣ, ತಮ್ಮಂದಿರ ಮೇಲೆ ಪ್ರೀತಿ ಇರುತ್ತದೆ. ಆದರೆ ಅದೇ ಪ್ರೀತಿ ಆಕೆಯ ಗಂಡನಾದ ಭಾವನಿಗೆ ಇವರ ಮೇಲೆ ಅಷ್ಟಾಗಿ ಇರುವುದಿಲ್ಲ. ಇವರೆಲ್ಲರೂ ಹೆಂಡತಿಯ ಸೋದರ, ಸೋದರಿ ಸಂಬಂಧವಷ್ಟೇ ಇರುತ್ತದೆ. ಹಾಗಾಗಿ ಅಕ್ಕ ಇರುವವರೆಗೆ ಭಾವನ ಮನೆಗೆ ಬಹಳ ಸಲೀಸಾಗಿ ಹೋಗಿ ಬರುವುದು ಮಾಡಬಹುದು. ಆದರೆ ಅಕ್ಕ ಏನಾದರೂ ಮರಣ ಹೊಂದಿದರೆ ಅದು ಸಾಧ್ಯವಾಗುವುದಿಲ್ಲ. ಅಕ್ಕನ ಜೊತೆಯಲ್ಲಿಯೇ ಭಾವನ ಸಂಬಂಧಕ್ಕೆ ತೆರೆ ಬೀಳುತ್ತದೆ. ಏಕೆಂದರೆ ಇದು ಪುರುಷ ಪ್ರಧಾನ ಸಮಾಜವಾದುದರಿಂದ ಆತ ಬೇರೊಂದು ವಿವಾಹವಾಗುತ್ತಾನೆ. ಆ ಸಂದರ್ಭ ಈ ಕಡೆಯ ಎಲ್ಲ ಸಂಬಂಧ ಕಡಿದು ಹೋಗುತ್ತದೆ ಎಂಬುದನ್ನು ಈ ಗಾದೆ ತಿಳಿಸುತ್ತದೆ. ಈ ಗಾದೆಗೆ ಪೂರಕವಾಗಿ 'ಅಣ್ಣ ನಮ್ಮೋನಾದ್ರೆ ಅತ್ಗೆ ನಮ್ಮೋಳ' ಎಂಬ ಗಾದೆಯನ್ನು ನೋಡಬಹುದು.

ಅಗಸನ ಅಂಗೈಲಿ ಉಣ್ಣಬಹುದು
ಕೆಲಸಿಗನ ಅಂಗಳದಲ್ಲಿ ಉಣ್ಣಕಾಗಲ್ಲ.

ಸಮಾಜದ ಎರಡು ವರ್ಗ ಮತ್ತು ಆ ಎರಡು ವರ್ಗದವರು ಮಾಡುವ ಕಾಯಕವನ್ನು ಪ್ರಸ್ತುತ ಗಾದೆಯು ಸಾದರ ಪಡಿಸುತ್ತಿದೆ. ಅಗಸ ಎಂದರೆ ಊರಿನ ಎಲ್ಲ ಬಟ್ಟೆಯನ್ನು ಒಗೆದು ಶುಚಿ ಮಾಡಿಕೊಡುವವನು. ಅದೇ ರೀತಿ ಕೆಲಸಿಗ ಎಂದರೆ ಕ್ಷೌರಿಕ. ಕೂದಲು ಕತ್ತರಿಸುವ ವೃತ್ತಿ ಈತನದು. ಈತನನ್ನು ಕೆಲಸಿಗ, ಹಜಾಮ, ಹೆಸರಿಲ್ಲದವನು, ಬಾರ್ಬರ್ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ರಾತ್ರಿಯ ವೇಳೆ ಈತನನ್ನು ಹೆಸರು ಹಿಡಿದು ಕರೆಯುವುದಿಲ್ಲ. ಆ ರೀತಿ ಕರೆಯುವುದು ನಿಷಿದ್ದ. ಇದು ಜನ ಸಾಮಾನ್ಯರ ನಂಬಿಕೆ. ಇದರ ಬಗ್ಗೆ 'ನಾಪಿತ ಎಂದರೆ ಪಾಪ ಬಂದೀತೇ?' ಎಂಬ ಗಾದೆಯೂ ಇದೆ. ಮೇಲಿನ ಗಾದೆಯನ್ನು ವಿಶ್ಲೇಷಿಸಿದರೆ ಅಗಸ ಮತ್ತು ಕೆಲಸಿಗ ವೃತ್ತಿ ನಿಮಿತ್ತವಾಗಿ ಮಾಡುವ ಕಾರ್ಯವನ್ನು ತಿಳಿಸುತ್ತದೆ. ಅಗಸನು ಯಾವಾಗಲೂ ಬಟ್ಟೆಯನ್ನು ಒಗೆಯಲು ನೀರಿನಲ್ಲೇ ಇರುತ್ತಾನೆ. ಹಾಗೆಯೇ ಬಟ್ಟೆಯನ್ನು ಶುಚಿ ಮಾಡುತ್ತಲೇ ಇರುವುದರಿಂದ ಆತನ ಅಂಗೈ ಕೂಡ ಶುಚಿಯಾಗಿರುತ್ತದೆ. ಶುದ್ಧವಾದ ಕೈಯಾಗಿರುವುದರಿಂದ ಅದರಲ್ಲಿ ಊಟ ಮಾಡಬಹುದು. ಅದರಿಂದ ಆರೋಗ್ಯಕ್ಕೆ ಯಾವುದೇ ತೊಂದರೆ ಉಂಟಾಗುವುದಿಲ್ಲ. ಆದರೆ ಕೆಲಸಿಗನ ವೃತ್ತಿ ಕೂದಲು ಕತ್ತರಿಸುವುದು. ಆದ ಕಾರಣ ಅವನ ಕೈ ಇರಲಿ ಇಡೀ ಮನೆಯ ಅಂಗಳವೆಲ್ಲ ಕೂದಲುಗಳಿಂದ ಆವೃತ್ತವಾಗಿರುತ್ತದೆ. ಇದರಿಂದ ಆತನ ಅಂಗಳದಲ್ಲಿಯೂ ಕೂಡ ನಿರ್ಭೀತಿಯಿಂದ ಕುಳಿತು ಊಟ ಮಾಡುವುದು ಸಾಧ್ಯವಾಗುವುದಿಲ್ಲ. ಕಾರಣ ಊಟದ ಜೊತೆ ಕೂದಲನ್ನೂ ತಿಂದು ಬಿಡುವ ಭಯದಿಂದ.

**ಆನೆಯಂಥದೂ ಮುಗ್ಗರಿಸ್ತದೆ.**

ಈ ಗಾದೆಯ ಅಂತರಾಳದಲ್ಲಿ ಅಡಗಿರುವ ಸಾಮಾಜಿಕ ಮೌಲ್ಯ ಅತ್ಯಂತ ರಮ್ಯವಾದುದು. ವಾಚ್ಯಾರ್ಥದಲ್ಲಿ ಅಂತಹ ಯಾವ ಅರ್ಥವೂ ಕಾಣದಿದ್ದರೂ ಸೂಚ್ಯಾರ್ಥ ಮನನೀಯವಾದುದು. ಆನೆ ಬೃಹತ್ ಪ್ರಾಣಿ. ಅದರ ನಡೆ ಧೀಮಂತವಾದುದು. ಯಾವುದೇ ಒನಪು, ಒಯ್ಯಾರವಿಲ್ಲದಿದ್ದರೂ ಒಂದು ರೀತಿಯ ಶಿಸ್ತಿನಿಂದ ಕೂಡಿರುತ್ತದೆ. ಅದರ ನಡೆಯಲ್ಲಿ ಯಾವುದೇ ವಕ್ರತೆಗೆ ಆಸ್ಪದವಿರುವುದಿಲ್ಲ. ಆದರೆ ಅಂತಹ ಆನೆಯೇ ಒಂದೊಂದು ಬಾರಿ ಮುಗ್ಗರಿಸುತ್ತದೆ ಎಂಬುದು ಗಾದೆಯ ವಾಚ್ಯಾರ್ಥ. ಗಾದೆಗಳು ಸಾಮಾನ್ಯವಾಗಿ ಪ್ರಾಣಿ ರೂಪಕದ ಮುಖಾಂತರ ಮನುಷ್ಯ ಜೀವನದ ವ್ಯಾಪಾರಗಳನ್ನು ತೆರೆದಿಡುತ್ತದೆ. ಅದೇ ರೀತಿ ಈ ಗಾದೆಯೂ ಕೂಡ.

ಆನೆಗೆ ರೂಪಕವಾಗಿ ಒಬ್ಬ ದೊಡ್ಡ ವ್ಯಕ್ತಿ, ಸಮಾಜದಲ್ಲಿ ಉನ್ನತ ಸ್ಥಾನಮಾನಗಳನ್ನು ಹೊಂದಿರುವ ವ್ಯಕ್ತಿ, ಒಬ್ಬ ಉತ್ತಮ ಮತ್ತು ಪ್ರಾಮಾಣಿಕ ವ್ಯಕ್ತಿ ಎಂಬುದನ್ನು ಅರ್ಥೈಸಿಕೊಳ್ಳಬೇಕು. ಇಂತಹ ವ್ಯಕ್ತಿ ತನ್ನ ಜೀವಮಾನದಲ್ಲಿ ಉತ್ತಮ ಕೆಲಸಗಳನ್ನೇ ಮಾಡುತ್ತಾ, ಜನ ಸಾಮಾನ್ಯರ ದೃಷ್ಟಿಯಲ್ಲಿ ಮೇಲ್ಮಟ್ಟದ ಸ್ಥಾನವನ್ನು ಪಡೆದಿರುತ್ತಾನೆ. ಆದರೆ ಯಾವುದೋ ಒಂದು ಕೆಟ್ಟ ಸಮಯದಲ್ಲಿ ಯಾವುದೋ ಒಂದು ತಪ್ಪು ಅಥವಾ ಅಚಾತುರ್ಯ ಮಾಡಿಬಿಡುತ್ತಾನೆ. ಅಂತಹ ಸಂದರ್ಭದಲ್ಲಿ ಶ್ರೀಸಾಮಾನ್ಯರು ಈ ರೀತಿಯಲ್ಲಿ ಹೇಳಿದ್ದಾರೆ. ಆನೆಯಂತದೂ ಮುಗ್ಗರಿಸುವ ಸಾಧ್ಯತೆ ಇರುವಾಗ ಮನುಷ್ಯ ಮಾತ್ರನಾದವನು ತಪ್ಪು ಮಾಡುವುದು ಸಹಜ. 'ತಪ್ಪು ಮಾಡುವುದು ಸಹಜ, ತಿದ್ದಿ ನಡೆಯೋನೆ ಮನುಜ'ಎಂಬ ಉಕ್ತಿಯಂತೆ ಮುಂದೆ ಆ ರೀತಿಯ ಯಾವುದೇ ತಪ್ಪು ಮಾಡಬಾರದು ಎಂಬುದೇ ಈ ಗಾದೆಯ ಆಶಯವಾಗಿದೆ. 'ಅಟ್ಟ ಮೇಲೆ ಒಲೆ ಉರೀತು, ಕೆಟ್ಟ ಮೇಲೆ ಬುದ್ದಿ ಬಂತು' ಎಂಬ ಗಾದೆಯಂತೆ ಬುದ್ದಿ ಕಲಿತು ನಡೆಯಬೇಕು ಎಂಬುದನ್ನು ತಿಳಿಸುತ್ತದೆ.

'ಅರುಂಧತಿ ನಕ್ಷತ್ರ ಕಂಡ್ಯೇನಮ್ಮ'? ಅಂತ ಕೇಳುದ್ರೆ
'ಕಂಡೋಳ್ಳ ಗಂಡುನ್ನ ತಿಂದ್ಕೊಳ್ಳಿ' ಎಂದಳಂತೆ.

ಮದುವೆಯ ಸಂದರ್ಭದಲ್ಲಿ ನಡೆಯುವ ಒಂದು ಸಂಪ್ರದಾಯವನ್ನು ಈ ಗಾದೆಯು ತಿಳಿಸುತ್ತದೆ. ಮದುವೆಯ ಸಂದರ್ಭದಲ್ಲಿ ತಾಳಿ ಕಟ್ಟುವ ಶಾಸ್ತ್ರ ಮುಗಿದು, ಧಾರೆ ಆದ ಮೇಲೆ ವಧು ವರರನ್ನು ಪುರೋಹಿತರು ಹೊರಗಡೆಗೆ ಕರೆದುಕೊಂಡು ಬಂದು ಆಕಾಶದ ಕಡೆಗೆ ತೋರಿಸಿ ಈ ರೀತಿ ಕೇಳುತ್ತಾರೆ. ಆಗ 'ಕಂಡೆ' ಎನ್ನಬೇಕು ಇದು ಸಂಪ್ರದಾಯ. ಆದರೆ ಪುರೋಹಿತರು ಆ ರೀತಿ ತೋರಿಸಿ ಕೇಳುವುದು ಹಗಲಿನ ವೇಳೆಯಲ್ಲಿ. ಅರುಂಧತಿ ನಕ್ಷತ್ರ ಸಾಮಾನ್ಯವಾಗಿ ರಾತ್ರಿ ವೇಳೆ ಗೋಚರವಾಗುವಂತಹುದು. ಆದುದರಿಂದ ಹಾಡು ಹಗಲಿನಲ್ಲಿ ನಕ್ಷತ್ರ ಕಾಣಲು ಸಾಧ್ಯವೇ? ಆದರೂ ಸಂಪ್ರದಾಯದ

ಚೌಕಟ್ಟಿನಲ್ಲಿ 'ಕಂಡೆ' ಎನ್ನಬೇಕು. ಈ ರೀತಿ ತೋರಲು ಕಾರಣ ಇಲ್ಲದಿಲ್ಲ. ಅರುಂಧತಿಯ ಪಾತಿವ್ರತ್ಯ ಭೂಮಿಯ ಎಲ್ಲ ಹೆಣ್ಣು ಮಕ್ಕಳಿಗೂ ಆದರ್ಶವಾಗಿರಲೆಂದು ವಿವಾಹ ಕಾಲದಲ್ಲಿ ನೂತನ ದಂಪತಿಗಳಿಗೆ ವಶಿಷ್ಠ, ಅರುಂಧತಿಯರ ನಕ್ಷತ್ರವನ್ನು ತೋರಿಸುವ ಪದ್ಧತಿಯುಂಟು. ಹೀಗೆ ತೋರಿಸುವಾಗ ಪುರೋಹಿತರು ಮಧುಮಗಳೊಬ್ಬಳಿಗೆ 'ಅರುಂಧತಿ ನಕ್ಷತ್ರ ಕಂಡ್ಯೇನಮ್ಮ' ಎಂದು ಕೇಳಿದರು. ಇದಕ್ಕೆ ಆ ಮದುವೆ ಹೆಣ್ಣು 'ಕಂಡೋಳ ಗಂಡುನ್ನ ತಿಂದ್ಕೊಳ್ಳಿ' ಎಂದಳಂತೆ. ಅರುಂಧತಿ ನಕ್ಷತ್ರವನ್ನು ತೋರಿಸುವ ಔಚಿತ್ಯದ ಕಲ್ಪನೆ ಇಲ್ಲದವಳು ಈ ರೀತಿ ಹೇಳಿರಬಹುದು. ವಾಸ್ತವವಾಗಿ ಅರುಂಧತಿ ನಕ್ಷತ್ರವನ್ನು ನೋಡಿದ ಮದುಮಗಳು ಚಿರಸೌಭಾಗ್ಯವತಿಯಾಗಿ ಬಾಳಿ ಇಹಪರ ಸಾಧನಾ ಚತುರಳಾಗುತ್ತಾಳೆ ಎಂಬುದು ಪರಂಪರಾನುಗತ ನಂಬಿಕೆ.

ಮುಂದಾಗಿ ಹುಟ್ಟೋ
ಮೂಗಳ ರಾಗಿ ಹೊತ್ಯೋ.

ಮನೆಯ ಹಿರಿಯಣ್ಣನ ಜವಾಬ್ದಾರಿಯನ್ನು ಈ ಗಾದೆಯು ತಿಳಿಸುತ್ತಿದೆ. ಮುಂದಾಗಿ ಹುಟ್ಟೋ ಎಂದರೆ ಮುಂದಾಗಿ ಹುಟ್ಟಿದವನು, ಮೊದಲು ಹುಟ್ಟಿದವನು. ಅಂದರೆ ಹಿರಿಯ ಮಗ ಎಂದು ಅರ್ಥ. ಮನೆಯಲ್ಲಿ ಮೊದಲು ಜನಿಸಿದವನು ಆ ಸಂಸಾರದ ಭಾರವನ್ನು ಹೊರಬೇಕಾಗುತ್ತದೆ. ತಂದೆಯ ಅನಂತರ ಆತನೇ ಯಜಮಾನ. ಆದುದರಿಂದ ಆ ಮನೆಯ ವ್ಯವಹಾರದ ಚಿಂತೆ ಈತನದೇ ಆಗಿರುತ್ತದೆ. ತನ್ನ ಅನಂತರ ಹುಟ್ಟಿದ ಸೋದರ, ಸೋದರಿಯರ ಲಾಲನೆ, ಪಾಲನೆ, ಪೋಷಣೆ ಮಾಡಿ ಅವರಿಗೆ ಒಂದು ಸ್ವಾವಲಂಬಿ ಬದುಕನ್ನು ಕಟ್ಟಿ ಕೊಡಬೇಕಾದುದು, ಹಾಗೆಯೇ ಅವರಿಗೆ ಮದುವೆ ಇತ್ಯಾದಿ ಕಾರ್ಯಗಳನ್ನು ಮಾಡುವುದು ಇವೇ ಮೊದಲಾದ ಹಲವಾರು ಸಂಸಾರ ಭಾರಗಳು ಆತನ ಮೇಲಿರುತ್ತವೆ. ಆದುದರಿಂದ ಅವನ ಜೀವನ ಕಷ್ಟ ಮತ್ತು ದುಃಖದಲ್ಲೇ ಮುಂದುವರೆಯುತ್ತದೆ. ಇವೇ ಮೊದಲಾದ ಅಂಶಗಳನ್ನು ಮೇಲಿನ ಗಾದೆಯು ತಿಳಿಸುತ್ತದೆ. ಇಲ್ಲಿ ಮೂಗಳ ಎಂದರೆ ಮೂರು ಕೊಳಗ. (ಕೊಳಗ ಧಾನ್ಯವನ್ನು ಅಳೆಯುವ ಸಾಧನ. ಇದು ಸಾಮಾನ್ಯವಾಗಿ ಆರು ಅಥವಾ ಏಳು ಸೇರು ಧಾನ್ಯವನ್ನು ಹಿಡಿಯುತ್ತದೆ.) ಮೂರು ಕೊಳಗ ರಾಗಿಯನ್ನು ಹೊತ್ತು ನಡೆಯುವುದು ಎಷ್ಟು ಶ್ರಮದಾಯಕವೋ ಹಾಗೇ ಹಿರಿಯ ಮಗನಾಗಿ ಜನಿಸಿದವನ ಜೀವನ ಬಹಳ ಶ್ರಮದಾಯಕವಾದುದು ಎಂಬುದನ್ನು ಈ ಗಾದೆಯು ಪ್ರತಿಬಿಂಬಿಸುತ್ತದೆ.

ಮಟ್ಟ ಮಂಗ್ಳಾರ ಮಗಳನ್ನು ಕಳಿಸ್ಬಾರ್ದು
ಸುಟ್ಟ ಸುಕ್ರಾರ ಸೊಸೆ ಕಳಿಸ್ಬಾರ್ದು.

ಈ ಗಾದೆಯು ಸಮಾಜದಲ್ಲಿ ಆಚರಣೆಯಲ್ಲಿರುವ ಸಂಪ್ರದಾಯ ಮತ್ತು ನಂಬಿಕೆಯನ್ನು ಧ್ವನಿಸುತ್ತದೆ. ಸಾಮಾನ್ಯವಾಗಿ ಸಮಾಜದಲ್ಲಿ ಮಂಗಳವಾರ ಮಗಳನ್ನು ಮತ್ತು ಶುಕ್ರವಾರ ಸೊಸೆಯನ್ನು ಕಳುಹಿಸುವುದಿಲ್ಲ. ಇದು ಸಂಪ್ರದಾಯ. ಮಂಗಳವಾರ ಎಂಬುದು ಅಮಂಗಳಕರವಾಗಿದೆ. ಅಂದು ಯಾವುದೇ ಶುಭಕಾರ್ಯವನ್ನು ಮಾಡುವುದಿಲ್ಲ. ಆದುದರಿಂದ ಗಂಡನ ಮನೆಗೆ ಹೋಗಬೇಕಾದ ಹೆಣ್ಣನ್ನು ಅಂದು ಕಳುಹಿಸಿದರೆ ಅಮಂಗಳ ಎಂಬ ಕಾರಣ ದಿಂದ ಕಳುಹಿಸುವುದಿಲ್ಲ. ಹಾಗೆಯೇ ಶುಕ್ರವಾರವನ್ನು ಲಕ್ಷ್ಮಿಯವಾರ ಎಂದು ಪೂಜಿಸುತ್ತಾರೆ. ಮನೆಯ ಸೊಸೆಯನ್ನು ಲಕ್ಷ್ಮಿ ಎಂದು ಭಾವಿಸಿರುವುದರಿಂದ ಶುಕ್ರವಾರ ಸೊಸೆಯನ್ನು ತಂದೆಯ ಮನೆಗೆ ಕಳುಹಿಸುವುದಿಲ್ಲ. ಕಳುಹಿಸಿದರೆ ಮನೆಯ ಲಕ್ಷ್ಮಿ ಸೊಸೆಯೊಂದಿಗೆ ಹೊರಹೋಗುತ್ತಾಳೆ ಎಂಬುದು ಇದರ ನಂಬಿಕೆ.

**ಮಾಡಬಾರ್ದು ಮಾಡಿದ್ರೆ ಆಗಬಾರ್ದು ಆಗ್ತದೆ.**

ಒಳ್ಳೆಯತನ ಎಂಬ ಮೌಲ್ಯವನ್ನು ಗಾದೆಯು ಪ್ರತಿಬಿಂಬಿಸುತ್ತಿದೆ. ಮಾಡಬಾರದ್ದು ಎಂದರೆ ಕೆಟ್ಟ ಕೆಲಸ ಅಥವಾ ಇತರರಿಗೆ ಕೆಟ್ಟದ್ದನ್ನು ಮಾಡುವುದು. ಅಂತಹ ಕೆಟ್ಟ ಕೆಲಸವನ್ನು ಮಾಡಿದರೆ ಅಥವಾ ಬೇರೆಯವರಿಗೆ ಕೆಟ್ಟದ್ದನ್ನು ಮಾಡಿ ತೊಂದರೆ ನೀಡಿದರೆ ಅದರ ಪರಿಣಾಮ ಕೆಟ್ಟದ್ದಾಗಿಯೇ ಇರುತ್ತದೆ ಎಂಬುದನ್ನು ಆಗಬಾರದ್ದು ಆಗುತ್ತದೆ ಎಂಬ ಮಾತು ಧ್ವನಿಸುತ್ತದೆ. ಹಾಗಾಗಿ ಯಾರಿಗೂ ಕೆಟ್ಟದ್ದನ್ನು ಮಾಡದೆ, ಯಾರನ್ನೂ ನೋಯಿಸದೆ ಇದ್ದಾಗ ಮಾತ್ರ ಅಂತಹ ವ್ಯಕ್ತಿಯ ಬದುಕು ಸುಸೂತ್ರವಾಗಿ ನಡೆಯುತ್ತದೆ ಎಂಬುದನ್ನು ಪರೋಕ್ಷವಾಗಿ ತಿಳಿಸುವುದರ ಮೂಲಕ ಸಮಾಜ ಸರಿ ದಾರಿಯತ್ತ ಹೊರಳಲು ಗಾದೆಯು ಸಹಾಯಕವಾಗಿದೆ.

**ಆಳಾಗಿ ದುಡಿ, ಅರಸಾಗಿ ಉಣ್ಣು.**

ಕಾಯಕ ಮತ್ತು ಕಾಯಕದ ಫಲ ಇವೆರಡನ್ನೂ ಗಾದೆಯು ಬಹಳ ಅರ್ಥಪೂರ್ಣವಾಗಿ ತಿಳಿಸುತ್ತಿದೆ. ಯಾವುದೇ ವ್ಯಕ್ತಿ ದುಡಿಯದೆ ಜೀವನವನ್ನು ನಡೆಸುವುದು ಅಸಾಧ್ಯ. ದುಡಿದಾಗ ಮಾತ್ರ ಬದುಕಿಗೆ ಬೇಕಾದ ಆರ್ಥಿಕ ಬಲ ದೊರಕಿ ಉತ್ತಮವಾದ ಬದುಕನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಹಾಗಾಗಿ ದುಡಿತದ ಮಹತ್ವವನ್ನು ಈ ಗಾದೆಯು ಈ ರೀತಿಯಲ್ಲಿ ತಿಳಿಸುತ್ತಿದೆ. ದುಡಿಯುವ ಸಂದರ್ಭದಲ್ಲಿ ಸೇವಕರ ಹಾಗೆ ದುಡಿದು ಬಿಡಬೇಕು. ಏಕೆಂದರೆ ದುಡಿಯುವ ಸಾಮರ್ಥ್ಯ ಮನುಷ್ಯನಿಗೆ ಎಲ್ಲ ಕಾಲದಲ್ಲಿಯೂ ಇರುವುದಿಲ್ಲ. ಯೌವನದಲ್ಲಿ ಮಾತ್ರ ದುಡಿಯುವ ಸಾಮರ್ಥ್ಯವಿರುತ್ತದೆ. ಮುಪ್ಪಿನಲ್ಲಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಸಮರ್ಥರಾಗಿಲ್ಲದ ಕಾರಣ ದುಡಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ ದುಡಿಯುವ ವಯಸ್ಸಿನಲ್ಲಿ ಚನ್ನಾಗಿ ದುಡಿಯಬೇಕು. ಆಗ ಮಾತ್ರ ಮುಪ್ಪಿನ ಕಾಲದಲ್ಲಿ ಕುಳಿತು ಆರಾಮವಾಗಿ ತಿನ್ನಲು ಸಾಧ್ಯ. ಇಲ್ಲದಿದ್ದಲ್ಲಿ ಜೀವನದ ಅಂತ್ಯಕಾಲದಲ್ಲಿ ತಿನ್ನುವುದಕ್ಕೂ ಗತಿ ಇಲ್ಲದೆ ಅನ್ಯರನ್ನು ಆಶ್ರಯಿಸಿ, ಅವರಿಂದ ನಿಂದನೆ, ತಾತ್ಸಾರದ ನುಡಿಗಳಿಗೆ ಭಾಜನವಾಗಬೇಕಾಗುತ್ತದೆ ಎಂಬುದನ್ನು ಗಾದೆಯು ತಿಳಿಸುತ್ತಿದೆ.

ಹೀಗೆ ಗಾದೆಗಳು ಒಂದು ಸಮಾಜದ ಮೌಲ್ಯಗಳನ್ನು ಒಳಗೊಂಡು ಸಮಾಜದ ಪ್ರತಿಬಿಂಬದಂತೆ ಕಾಣುವುದಲ್ಲದೆ, ಸಮಾಜಕ್ಕೆ ಮಾರ್ಗದರ್ಶನವನ್ನು ಮಾಡುವ ಮೂಲಗಳಾಗಿರುತ್ತವೆ. ಅವುಗಳ ಅರ್ಥವನ್ನು ಸರಿಯಾದ ರೀತಿಯಲ್ಲಿ ಗ್ರಹಿಸಿ, ಜೀವನದಲ್ಲಿ ಅಳವಡಿಸಿಕೊಂಡರೆ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದರ ಜೊತೆಗೆ, ಉತ್ತಮ ಸಮಾಜದ ರಚನೆಗೆ ಕಾರಣವಾಗಬಹುದು. ಇಲ್ಲಿ ಕೆಲವೇ ಕೆಲವು ಗಾದೆಗಳನ್ನು ಪ್ರಾಸಂಗಿಕವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹಾಗೆಂದ ಮಾತ್ರಕ್ಕೆ ಈ ಗಾದೆಗಳಲ್ಲಿ ಮಾತ್ರ ಸಾಮಾಜಿಕ ಮೌಲ್ಯಗಳು ಕಂಡು ಬರುತ್ತವೆ. ಉಳಿದ ಗಾದೆಗಳಲ್ಲಿ ಇಲ್ಲ ಎಂದು ಭಾವಿಸಬಾರದು. ಮನುಷ್ಯನ ಅನುಭವದಿಂದ ಪಡಿಮೂಡಿರುವ ಪ್ರತಿಯೊಂದು ಗಾದೆಯಗಳಲ್ಲಿಯೂ ಸಾಮಾಜಿಕ ಮೌಲ್ಯಗಳನ್ನು ಕಾಣಬಹುದು.

**ಪರಾಮರ್ಶನ ಗ್ರಂಥಗಳು:**


1. ಸುಧಾಕರ : ನಮ್ಮ ಸುತ್ತಿನ ಗಾದೆಗಳು ಪ್ರತಿಭಾ ಪ್ರಕಾಶನ, ಮೈಸೂರು 2ನೇ ಮುದ್ರಣ, 1987.
2. ಡಾ. ರಾಗೌ (ರಾಮೇಗೌಡ) : ನಮ್ಮ ಗಾದೆಗಳು ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು 5ನೇ ಮುದ್ರಣ, 2007.
3. ನಂ. ತಪಸ್ವಿಕುಮಾರ : ಕನ್ನಡ ಗಾದೆಗಳ ಸಮೀಕ್ಷೆ ಪ್ರಸಾರಾಂಗ, ಮೈಸೂರು ವಿ.ವಿ, 1972.
4. ಡಾ. ರಾಗೌ : ಕಿಟ್ಟೆಲ್ ಕೋಶದ ಗಾದೆಗಳು ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು 3ನೇ ಮುದ್ರಣ, 1998.
5. ಡಾ. ಪಿ.ಕೆ ರಾಜಶೇಖರ್ : ಪುರುಷನ ಪುಣ್ಯ ನಾರೀಭಾಗ್ಯ ಹೊನ್ನಾರು ಜನಪದ, ಮೈಸೂರು, 2006.
6. ಸುಧಾಕರ : ಜಾನಪದ ಮತ್ತು ಕಲಬೆರಕೆತನ ರಮ್ಯರೂಪ ಪ್ರಕಾಶನ, ಬೆಂಗಳೂರು, 1984.
7. ಡಾ. ರಾಗೌ : ಷಷ್ಟಿ ಸಂಪದ ಸಂವಹನ ಪ್ರಕಾಶನ, ಮೈಸೂರು, 2005.